### ಕಥೆಯ ಮೂಲಕ ಕಂಡ ಪ್ರಪಂಚ

ಕೇಶವರೆಡ್ಡಿ ಹಂದ್ರಾಳ ಅವರ 'ಆಸ್ಕರ್ ವೈಲ್ಡನ ನೈಟಿಂಗೇಲ್ಸ್' ಧಾರಾವಾಹಿ ಚೆನ್ನಾಗಿ ಮೂಡಿಬರುತ್ತಿದೆ. ಮುಂಬೈನ ಕಾಮಾಟಿಪುರ ಮತ್ತು ಧಾರಾವಿಯನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿರುವುದನ್ನು ಓದಿ ಅರೆಕ್ಷಣ ಬೆಚ್ಚಿಬಿದ್ದೆ. ಮನಸ್ಸು ತಲ್ಲಣಿಸಿತು. ಕಥೆ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಬಗ್ಗೆ ಬೆಳಕು ಚೆಲ್ಲಿರುವ ರೀತಿ ಚೆನ್ನಾಗಿದೆ.

—ಗಾಯತ್ರಿ ವೆಂಕಟೇಶ್, ಮೈಸೂರು

### ಕಣ್ಣು ತುಂಬಿ ಬಂತು

'ಸೆರೆವಾಸಿಗಳ ಕುಟುಂಬದ ಅಳಲು; ನೆರವಿಗೆ ಸಹಾನುಭೂತಿಯ ನೆರಳು' (ಏ. 17, ಸುಬ್ರಮಣ್ಣ ಎಚ್.ಎಂ.) ಬರಹದಲ್ಲಿ ತಮ್ಮದಲ್ಲದ ತಪ್ಪಿನಿಂದ ಸೆರೆವಾಸ ಅನುಭವಿಸುತ್ತಿರುವ ಕುಟುಂಬದವರ ಪಡಿಪಾಟಲನ್ನು ಹೃದಯ ಕರಗುವಂತೆ ವಿವರಿಸಿದ್ದಾರೆ. ಓದಿ ಕಣ್ಣುಂಬಿಬಂತು. ಸೆರೆವಾಸಿ ಕುಟುಂಬಸ್ಥರು ಈ ಬಗ್ಗೆ ಸಂಘ ರಚಿಸಿ ಹೋರಾಟ ಮಾಡುತ್ತಿರುವುದು ಶ್ಲಾಘನೀಯ.

—ಕೆ.ಆರ್. ಜಯಲಕ್ಷ್ಮಿ, ಕಂಪಲಾಪುರ

### ಸ್ವಾರಸ್ಯ ಹೆಚ್ಚುತ್ತಿತ್ತು



'ನೆರಳು' (ಏ. 17, ಪದ್ಮಿನಿ ನಾಗರಾಜು) ಪತ್ತೇದಾರಿ ಕಥೆಯ ನಿರೂಪಣೆ ಅತ್ಯುತ್ತಮವಾಗಿತ್ತು. ಅಂತ್ಯ ಮಾತ್ರ ತುಸು ನಿರಾಸೆ ಮೂಡಿಸಿತು. ಅನಾಮಧೇಯ ಪತ್ರ ಬರೆದವರಾರು, ಕೊಲೆ ಮಾಡಿದ್ದನ್ನು ಹೇಗೆ ಪತ್ತೆ ಮಾಡಿದ್ದು, ಅದಕ್ಕೆ ಸಾಕ್ಷ್ಯಗಳೇನು, ಕೊಲೆಗಾರನ ಬಂಧನಕ್ಕೆಂದು ಹೋದ ಮುಜೀದ್, ಶಿವ ತನ್ನ ಕಸ್ಟಡಿಯಲ್ಲೇ ಇದ್ದಾನೆಂದು ಹೇಳುವುದೆಂತು, ಇತ್ಯಾದಿಗಳಿಗೆ ವಿವರಣೆ ನೀಡಿದ್ದರೆ ಕಥೆಗೆ ಸ್ವಾರಸ್ಯ ಹೆಚ್ಚುತ್ತಿತ್ತು ಎನಿಸಿತು.

—ರವಿರಾಜ ಬೈಕಂಪಾಡಿ

### ಪರಿಚಿಂತನೀಯ

'ರಿಟ್ರೀಟ್' ಪರಿಕಲ್ಪನೆ ಬರಿ ಕಲ್ಪನೆಯಲ್ಲ (ಮರೀಚಿಕೆಯಲ್ಲ). ವಸ್ತುಪರಿಸ್ಥಿತಿಯ ಸಕಾಲಿಕ, ಮೌಲಿಕ ನಿರೂಪಣೆಯೇ ಸರಿ!

—ಸಿಪಿಕೆ, ಮೈಸೂರು

### 'ಮಹು' ಎನ್ನುತ್ತಾರೆ...

'ಭೀಮ್ ಜನ್ಮಭೂಮಿ' (ಏ. 17, ಡಿ.ಜಿ. ಮಲ್ಲಿಕಾರ್ಜುನ) ಲೇಖನದಲ್ಲಿ ಸ್ಥಳದ ಹೆಸರು 'ಮೋವ್' ಎಂದಿದೆ. ಇಂಗ್ಲಿಷ್‌ನಲ್ಲಿ ಆ ಊರಿನ ಹೆಸರು MHOW. ಇದರ ಅಧಿಕೃತ ವಿಸ್ತೃತ ಪದ ಇಲ್ಲ. ಕೆಲವು ಲೇಖನಗಳಲ್ಲಿ Military Headquarters Of Warfare ಎಂದಿದೆ. ನಾನು ಈ ಊರಿನ ಮೂಲಕ ಹಲವು ಬಾರಿ ಹಾದುಹೋಗಿದ್ದೇನೆ. ಜನ ಇದನ್ನು 'ಮಹು' ಎಂದು ಕರೆಯುತ್ತಾರೆ. ಚಂಬಲ್ ನದಿಯ ಉಗಮ ಹತ್ತಿರದ ಬೆಟ್ಟಗಳಲ್ಲೇ.

—ಎಚ್.ಎಸ್. ಮಂಜುನಾಥ, ಗೌರಿಬಿದನೂರು

### ಮೊಬೈಲ್ ದಾಸ್ಯ!

'ಪುಸ್ತಕಕ್ಕೆ ಬಗ್ಗದ ಮಸ್ತಕ ಮೊಬೈಲ್‌ಗೆ ಬಗ್ಗಿತು' (ಏ. 17, ಪ್ರೀತಿ ಎಮ್. ಸಂಗಮ್) ಸೊಗಸಾದ ಲೇಖನ. ಮೊಬೈಲ್‌ಗೆ ದಾಸರಾಗಿರದ ನಮ್ಮಂಥವರು ಇದನ್ನು ಪತ್ರಿಕೆಯಲ್ಲಿ ಓದಿ ಆನಂದಿಸಿದೆವು. ಆದರೆ ಮೊಬೈಲ್‌ಗೆ ದಾಸರಾಗಿರುವವರು ಓದಿ ಆನಂದಿಸಬೇಕಾದರೆ ಇದನ್ನು ಮೊಬೈಲ್‌ಗೇ ಹಾಕಬೇಕೇನೋ?!

—ಬಿ. ಶೋಭಾ ಅರಸ, ತೆಕ್ಕಟ್ಟೆ

### ಪ್ರಮಾದ ಆಗದಿರಲಿ

ಏಪ್ರಿಲ್ 17ರ ಸಂಚಿಕೆಯ 'ಪದಬಂಧ'ದಲ್ಲಿ ತಪ್ಪಾಗಿದೆ. ಎಡದಿಂದ ಬಲಕ್ಕೆ ಇರುವ ಪ್ರಶ್ನೆ ಸಂಖ್ಯೆ 19 ಮಾಯವಾಗಿದೆ.

'ಸುಧಾ' ಬಂದ ತಕ್ಷಣವೇ ಮೊದಲಿಗೆ 'ಪದಬಂಧ'ವನ್ನು ಬಿಡಿಸುವುದು ಎಷ್ಟೋ ಓದುಗರ ಅಭ್ಯಾಸ. ಇದಕ್ಕೆ ಅಪಾರ ಓದುಗ ಬಳಗವಿದೆ. ಇಂಥ ಪ್ರಮಾದಗಳು ನುಸುಳದಿರಲಿ.

—ದುಂಡಪ್ಪ ನಂದೆನ್ನವರ ಬೆಳಗಾಂವಿ




### ಪೋಷಕರು ಓದಬೇಕು

'ಸ್ವಾಸ್ಥ್ಯ ಸಮಯ' (ಏ. 17) ಮುಖಪುಟ ಲೇಖನ ದೇಹಿಕ ಆರೋಗ್ಯದ ಜೊತೆಗೆ ಮಾನಸಿಕ ಸ್ವಾಸ್ಥ್ಯದ ಕುರಿತು ಸಾಕಷ್ಟು ಮಾಹಿತಿಗಳನ್ನು ನೀಡಿತು. ಮುಖಪುಟದ ಅಡಿಯಲ್ಲಿ ಪ್ರಕಟಗೊಂಡ ಮೂರು ಲೇಖನಗಳೂ ಬಹಳ ಉಪಯುಕ್ತವಾಗಿವೆ. ಈಚೆಗೆ ಹೆಚ್ಚುತ್ತಿರುವ ಮಕ್ಕಳ ದಿಢೀರ್ ಸಾವಿನ ಪ್ರಕರಣಗಳ ಕುರಿತು ಡಾ. ಕೆ.ಬಿ. ರಂಗಸ್ವಾಮಿಯವರ ಬರಹ ಮೌಲ್ಯಯುತವಾಗಿದೆ. ಪೋಷಕರು ಓದಿ ತಿಳಿದುಕೊಳ್ಳಬೇಕಾದ ಲೇಖನವಿದು. ಹಾಗೇ 'ವಿಪಶ್ಯನ ಧ್ಯಾನ'ದ ಮಹತ್ವದ ಕುರಿತಂತೆ ಶಿವಕುಮಾರ ಬಿ.ಬಿ. ಬೈರೇನಹಳ್ಳಿ ಅವರ ಲೇಖನವೂ ಇಂದಿನ ಅಗತ್ಯವಾಗಿದೆ.

— ಮೌಲ್ಯ ಎಂ.ಎಸ್., ಬೆಂಗಳೂರು

### ತಿಂದವನಿಗೇ ಗೊತ್ತು ಬೆಲ್ಲದ ಸವಿ

ಬಾಯಿಯಿಂದ ಬಾಯಿಗೆ ಮಾತ್ರ ಪ್ರಚಾರವಾಗುತ್ತಿರುವ, ಧ್ಯಾನ ಮಾಡಿರುವವರಿಂದ ಮಾತ್ರ ವಿಪಶ್ಯನದ ಬಗ್ಗೆ ಮಾಹಿತಿ ಸಿಗುತ್ತಿರುವ ಈ ಸಂದರ್ಭ 'ಸುಧಾ' ಅತ್ಯುತ್ತಮ ಲೇಖನ ನೀಡಿದೆ. 'ತಿಂದವನಿಗೇ ಗೊತ್ತು ಬೆಲ್ಲದ ಸವಿ' ಎನ್ನುವ ನಾಣ್ಣುಡಿಯಂತೆ, ವಿಪಶ್ಯನ ಶಿಬಿರದಲ್ಲಿ ಭಾಗವಹಿಸಿದವರಿಗೇ ಗೊತ್ತು ವಿಪಶ್ಯನದ ಲಾಭ. ಲೇಖಕರು ಅತ್ಯುತ್ತಮವಾಗಿ, ಸರಳ ಭಾಷೆಯಲ್ಲಿ ಮಾಹಿತಿ ನೀಡಿದ್ದಾರೆ.

—ಡಾ. ಜಿ.ಟಿ. ಗೋವಿಂದಪ್ಪ, ದಾವಣಗೆರೆ

### ಮುಂಜಾಗ್ರತೆಯೇ ಮದ್ದು

ಚಿಕಿತ್ಸೆಗಿಂತಲೂ ಮುನ್ನೆಚ್ಚರಿಕೆಯೇ ಉತ್ತಮ ಮದ್ದು ಎಂಬುದನ್ನು ಬಹಳ ಚೆನ್ನಾಗಿ ವಿವರಿಸಿವೆ ಮುಖಪುಟದ ಮೂರು ಬರಹಗಳು. ರೋಗ ಬಂದ ಮೇಲೆ ಅಲೆದಾಡುವುದಕ್ಕಿಂತ ಮುಂಜಾಗ್ರತೆ, ಕಾಳಜಿಯಿಂದ ಜೀವನಶೈಲಿ ಅಳವಡಿಸಿಕೊಂಡರೆ ಒಳಿತು. ಇದೇ ಕಾಳಜಿಯನ್ನು 'ಸುಧಾ' ಓದುಗರಿಗೆ ಲೇಖನಗಳ ಮೂಲಕ ವ್ಯಕ್ತಪಡಿಸುತ್ತಿರುವುದು ಶ್ಲಾಘನಾರ್ಹ.

— ಆರ್.ಎಸ್. ಮಲ್ಲಾರಿ ರಾವ್, ಬೆಂಗಳೂರು

### ಅತ್ಯುತ್ತಮ ಬರಹಗಳ ಹೋಳಿಗೆ

ಅನೇಕ ಆಕರ್ಷಕ ಲೇಖನಗಳಿಂದ ಕೂಡಿರುವ 'ಸುಧಾ ಯುಗಾದಿ ವಿಶೇಷಾಂಕ 2025' ಅನ್ನು ತುಂಬ ಸಂತೋಷದಿಂದ ಓದಿರುವೆ. 'ಲಿಟ್ಲ್ ಇಂಗ್ಲೆಂಡ್' ಕೆಜಿಎಫ್ ಲೇಖನ ಕುತೂಹಲದಿಂದ ಕೂಡಿದೆ. ಈ ಇತಿಹಾಸ ಪ್ರಸಿದ್ಧ ಸ್ಥಳದ ಪರಿಚಯ ಮಾಡಿಸಿದ ಲೇಖಕರಿಗೆ ಧನ್ಯವಾದ. ಬಿ.ವಿ. ಶ್ರೀನಾಥ್ ಅವರ 'ಸುಂದರ ಸ್ಮೃತಿಗಳು' ಕಥೆಗಾರರ ಏಳುಬೀಳುಗಳ ಜೀವನ ಪರಿಚಯ ಮಾಡಿಕೊಟ್ಟಿದೆ. ಆನ್‌ಲೈನ್ ವಂಚನೆಯಿಂದ ಪಾರಾದವರ ವಿಷಯ ಎಲ್ಲರಿಗೂ ಎಚ್ಚರಿಕೆಯ ಗಂಟೆಯಾಗಿದೆ. 'ವಧುವರಾನ್ವೇಷಣೆ' ಪತ್ರಗಳನ್ನು ಓದಿ ಹೊಟ್ಟೆ ತುಂಬಾ ನಕ್ಕಿದೆ.. ಒಳ್ಳೆಯ ಲೇಖನಗಳ ಯುಗಾದಿಯ ಹೋಳಿಗೆಯ ಊಟ ಒದಗಿಸಿದ 'ಸುಧಾ'ಳಿಗೆ ವಿಶೇಷ ನಮಸ್ಕಾರಗಳು...

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in